ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಸಚಿವರು).—

ಅ) ೧೦೦ ಹಾಸಿಗೆಗಳ ಒಂದು ಆಸ್ಪತ್ರೆಯನ್ನು ೧೯೭೯ರಲ್ಲಿ ಕಟ್ಟಲಾಯಿತು,

ಆ) ಹೌದು.

ಇ) ಹೌದು.

ಈ) ಹಣದ ಲಭ್ಯತೆಯನ್ನು ಅನುಸರಿಸಿ ಕ್ರಮಕೈಗೊಳ್ಳಲಾಗುವುದು.

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ. ಹಾಸನದಲ್ಲಿ ೧೯೭೯ನೇ ಇಸವಿಯಲ್ಲಿ ೧೦೦ ಹಾಸಿಗೆಗಳ ಒಂದು ಆಸ್ಪತ್ರೆಯನ್ನು ಕಟ್ಟಲಾಯಿತು. ಆಗಿನ ಪ್ರಜಾ ಸಂಖ್ಯೆ ೨೦ ಸಾವಿರ ಇತ್ತು. ಈಗ ಅದು ಒಂದು ಲಕ್ಷಕ್ಕೂ ಮೀರಿದೆ. ಮತ್ತು ರೋಗಿಗಳ ಸಂಖ್ಯೆಯೂ ಸಹ ಹೆಚ್ಚಾಗಿದೆ. ರೋಗಿಗಳು ಸ್ಥಳಾವಕಾಶ ಇಲ್ಲದೆ ಹೊರಾಂಡದಲ್ಲಿ ನೆಲದ ಮೇಲೆ ಮಲಗಿರುತ್ತಾರೆ. ರೋಗಿಗಳು ನೆಲದ ಮೇಲೆ ಕಾಯಿಲೆಯಿಂದ ನರಳುವಂತಹ ಪರಿಸ್ಥಿತಿ ಇದೆ. ಈ ಬಗ್ಗೆ ಅನೇಕ ವರ್ಷಗಳಿಂದ ಹೆಚ್ಚಿನ ಬೆಡ್‌ಗಳಿಗಾಗಿ ಒತ್ತಾಯ ಮಾಡಲಾಗುತ್ತಿದೆ. ಆದರೂ ಏನೂ ಕ್ರಮ ಕೈಗೊಂಡಿಲ್ಲ. ರೋಗಿಗಳಿಗೆ ಉಪಶಮನ ಮಾಡುವ ಬದಲು ಆ ಆಸ್ಪತ್ರೆ ರೋಗಗಳ ಉತ್ಪಾದನಾ ಘಟಕ ಆಗಲಿಕ್ಕೆ ಹತ್ತಿದೆ. ಮಾನ್ಯ ಅಧ್ಯಕ್ಷರೇ ನಾನು ಮಾನ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತಿದ್ದೇನೆ ಅಲ್ಲಿ ೨೦೦ ಹಾಸಿಗೆಗಳ ಆಸ್ಪತ್ರೆಯನ್ನು ಕಟ್ಟಲು ಹಿಂದೆ ಆಶ್ವಾಸನೆ ಕೊಟ್ಟಿದ್ದರು. ಇದನ್ನು ಅತ್ಯಂತ ತುರ್ತು ಸೇವೆ ಎಂದು ಪರಿಗಣಿಸಿ ಮಾಡಬೇಕು. ಹಣದ ಲಭ್ಯತೆಯನ್ನು ಅನುಸರಿಸಿ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳುವುದು ಮಾಮೂಲಿನ ಉತ್ತರ ಹಾಗಲ್ಲ. ಅತ್ಯಂತ ತುರ್ತು ಸೇವೆ ಎಂದು ಪರಿಗಣಿಸಿ ೧೯೯೦-೯೧ನೇ ಇಸವಿಯಲ್ಲಿಯೇ ಈ ಆಸ್ಪತ್ರೆಯ ವಾರ್ಡ್ ಕಟ್ಟಲಂ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಆಚಾರ್‌ರವರು ಬೈಂದೂರಿನವರು, ಆದರೆ ನಾನು ಹಾಸನದವರು. ಆದ್ದರಿಂದ ನನಗೆ ಅಲ್ಲಿನ ಪರಿಸ್ಥಿತಿ ಚೆನ್ನಾಗಿ ಗೊತ್ತು. ಆದರೆ ಹಣದ ಅಭಾವ ನಮಗೆ ಎಷ್ಟು ಇದೆ ಎನ್ನುವುದೂ ತಮಗೂ ಗೊತ್ತಿದೆ. ಆದ್ದರಿಂದ ಅಲ್ಲಿ ವಾರ್ಡ್ ಕಟ್ಟಲಿಕ್ಕೆ ಆಗಲಿಲ್ಲ. ಅಲ್ಲಿ ೨೦೦ ಹಾಸಿಗೆಗಳ ಒಂದು ವಾರ್ಡ್ ಕಟ್ಟಬೇಕೆಂದು ನೀಲಿ ನಕಾಶೆ ತಯಾರಾಗಿದೆ. ಅದನ್ನು ಕಟ್ಟುವುದಕ್ಕೂ ಏರ್ಪಾಡು ಮಾಡಿ ಆಗಿದೆ. ಆದೂ ಅಲ್ಲದೆ ಅಲ್ಲಿ ೨೦ ಹಾಸಿಗೆಗಳ ಒಂದು ಮಕ್ಕಳ ವಾರ್ಡ್ ಸಹ ಹೊಸದಾಗಿ ಕಟ್ಟಬೇಕೆನ್ನುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ. ಅವಶ್ಯ ಬಿದ್ದಾಗ ಹಣ ಒದಗಿಸಲು ಕ್ರಮಕೈಗೊಳ್ಳಲಾಗುವುದು.

ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಾಧ್ಯಾಪಕರ ಜೇಷ್ಠತಾ ಪಟ್ಟಿಯ ಬಗ್ಗೆ

೧೩೫. ಶ್ರೀ ಡಿ. ಎ. ಚಿನ್ನಪ್ಪ (ಮಡಿಕೇರಿ).ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಪ್ರಾಧ್ಯಾಪಕರ ಜೇಷ್ಠತಾ ಪಟ್ಟಿಯನ್ನು ಒಂದು ದಶಕದಿಂದೀಚೆಗೆ ಹೊರಡಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಅದಕ್ಕೆ ಯಾರು ಜವಾಬ್ದಾರರು ?

(ಆ) ಜೇಷ್ಠತಾ ಪಟ್ಟಿ ಇಲ್ಲದೆ ಕೆಲವು ಪ್ರಾಧ್ಯಾಪಕರಿಗೆ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರ ಹುದ್ದೆಗೆ ಬಡ್ತಿ ನೀಡಲಾಗಿದೆಯೇ ?

(ಇ) ಹಾಗಿದ್ದಲ್ಲಿ ಯಾವ ಆಧಾರದ ಮೇಲೆ ಅವರಿಗೆ ಬಡ್ತಿ ನೀಡಲಾಗಿದೆ ?

(ಈ) ಸರ್ಕಾರದ ಜೇಷ್ಠತಾಪಟ್ಟಿಯನ್ನು ಹೊರಡಿಸಿ ಈಗಾಗಲೇ ನಿವೃತ್ತಿ ಹೊಂದಿದವರಿಗೆ ಜೇಷ್ಠತಾ ಆಧಾರದ ಮೇಲೆ ವೇತನ ಸಿಗುವಂತಲ್ಲದೆ ಅವನು ಪಡೆಯಲು ಅನುಕೂಲವಾಗುವಂತೆ ಕ್ರಮ ಕೈಗೊಳ್ಳಲಾಗಿದೆಯೇ ?

ಶ್ರೀಮತಿ ಕೆ. ಎಸ್, ನಾಗರತ್ನಮ್ಮ (ಆರೋಗ್ಯ ಸಚಿವರು).—

(ಅ) ಪ್ರಾಧ್ಯಾಪಕರ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ದಿನಾಂಕ ೩೧-೮-೯೭ ರಂದು ಹೊರಡಿಸಲಾಗಿದೆ ಹಾಗೂ ಹಲವು ಆಕ್ಷೇಪಣೆಗಳು ಬಂದಿವೆ.

(ಆ) ತಾತ್ಕಾಲಿಕ ಜೇಷ್ಠತಾಪಟ್ಟಿಯ ಆಧಾರದ ಮೇಲೆ ನೀಡಲಾಗಿದೆ.

(ಇ) ಹೌದು.

ಶ್ರೀ ಡಿ. ಎ. ಚಿನ್ನಪ್ಪ.—ಮಾನ್ಯ ಅಧ್ಯಕ್ಷರೇ, ೧೯೮೭ನೇ ಇಸವಿ ಆಗಸ್ಟ್ ೩೧ ರಂದು ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಹೊರಡಿಸಲಾಗಿದೆ ಎಂದು ಹೇಳಿದ್ದಾರೆ. ಈಗ, ಫೈನಲ್ ಲಿಸ್ಟ್ ಯಾವಾಗ ಮಾಡುತ್ತೀರಿ ಈ ಪ್ರಾವಿಷನಲ್ ಲಿಸ್ಟ್‌ನಲ್ಲಿ ಬಹಳಷ್ಟು ಜನರಿಗೆ ತೊಂದರೆಯಾಗಿದೆ, ಆದ್ದರಿಂದ ಫೈನಲ್ ಲಿಸ್ಟ್ ಯಾವಾಗ ಮಾಡುತ್ತೀರೆಂದು ನಾನು ಕೇಳುತ್ತೇನೆ. ಆಮೇಲೆ, ಪ್ರಮೋಷನ್‌ನ್ನು ಪ್ರಾವಿಷನಲ್ ಲಿಸ್ಟ್ ಪ್ರಕಾರ ಮಾಡಿದ್ದೀರಿ, ಈ ಪ್ರಾವಿಷನಲ್ ಲಿಸ್ಟ್ ಪ್ರಕಾರ ಕೆಲವರಿಗೆ ತೊಂದರೆಯಾಗಿದೆ. ಅಂದರೆ ಇದರಿಂದ ಸೀನಿಯರ್, ಜೂನಿಯರ್ ಆಗಿದ್ದಾರೆ, ಜೂನಿಯರ್ ಸೀನಿಯರ್ ಆಗಿದ್ದಾರೆ. ಇದರಿಂದ ಬಹಳಷ್ಟು ವೈದರಿಗೆ ಬಹಳ ತೊಂದರೆಯಾಗಿದೆ. ಇದರ ಬಗ್ಗೆ ಸೂಕ್ತ ಕ್ರಮ ಕೈಗೊಂಡು ಅದನ್ನು ಸರಿಪಡಿಸಬೇಕೆಂದು ನಾನು ಕೇಳುತ್ತೇನೆ. ಮೂರನೆಯದ್ದು ಈ ಪ್ರಮೋಷನ್ ಗಲಾಟೆಯಲ್ಲಿ ಬಹಳಷ್ಟು ಜನ ನಿವೃತ್ತರಾಗಿದ್ದಾರೆ. ರಿಟೈರ್ಡ್ ಆದವರಿಗೆ ಪ್ರಮೋಷನ್ ಇಲ್ಲ. ಪ್ರಮೋಷನ್ ಆದ ಡೇಟ್‌ನಿಂದ ಸಂಬಳದ ಬೆನಿಫಿಟ್ ಇಲ್ಲ ಆದನ್ನು ಮಾಡಿ ಕೊಡುತ್ತೇವೆಂದು ಹೇಳಿದ್ದೀರಿ, ಈ ಬಗ್ಗೆ ಯಾವಾಗ ರಿಟೈರ್ಡ್ ಆದವರಿಗೆ ಮಾಡಿಕೊಡುತ್ತೀರಿ ? ಅವರಿಗೆ ಯಾವ ರೀತಿಯಲ್ಲಿ ಅವರ ಸ್ಯಾಲರಿ ಸೆಟ್ಲ್‌ಮೆಂಟ್ ಮಾಡುತ್ತೀರಿ? ಅಮತ್ತು ಪರಿಗೆ ಪೆನ್‌ಷನ್ ಯಾವ ಸಂಬಳದ ರೀತಿಯಲ್ಲಿ ಕೊಡುತ್ತೀರೆಂದು ನಾನು ಕೇಳುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ಒಂದು ಪ್ರಾವಿಷನಲ್ ಸೀನಿಯಾರಿಟಿ ಲಿಸ್ಟ್ ಅನ್ನು ಪ್ರೊಫೆಸರ್ಸ್‌ಗೆ ಸಂಬಂಧ ಪಟ್ಟಂತೆ ೫೧-೮-೮೭ ರಲ್ಲಿ ತಯಾರು ಮಾಡಲಾಯಿತು. ಇದರ ಪ್ರಕಾರ ಪ್ರಮೋಷನ್ ಕೊಟ್ಟುಕೊಂಡು ಬಂದಿವ್ವೇವೆ. ಇವರಿಂದ ಅಬ್ಜಕ್ಷನ್ ಬಂದಿವೆ. ಮತ್ತೆ ಫೈನಲ್ ಲಿಸ್ಟ್ ಆದ ಮೇಲೆ ಆದಕ್ಕೆ ತಕ್ಕಂತೆ, ರಿಟೈರ್ಡ್ ಆದವರಿಗೆ ಮತ್ತು ಯಾರು ಯಾರಿಗೆಕೊಡ ಬೇಕೋ ಅವರಿಗೆ ಕೊಡಬೇಕಾದ ಎಲ್ಲಾ ಕಾಣಕಾಸಿಸ ಸೌಕರ್ಯ ಮತ್ತು ಇತರೇ ಎಲ್ಲಾ ತರಹದ ಸೌಕರ್ಯವನ್ನು ಅವರಿಗೆ ಕೊಡಲಾಗುತ್ತದೆ.

ವೈದ್ಯಾಧಿಕಾರಿಗಳ ಖಾಲಿ ಹುದ್ದೆಗಳ ಬಗ್ಗೆ

೨೨೯. ಶ್ರೀ ಆರ್. ಎನ್. ನಾಯ್ಕ (ಭಟ್ಕಳ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ರಾಜ್ಯದಲ್ಲಿ ಖಾಲಿ ಇರುವ ವೈದ್ಯರುಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು);

(ಆ) ಹೊನ್ನಾವರ ತಾಲ್ಲೂಕಿನಲ್ಲಿ ವೈದ್ಯಾಧಿಕಾರಿಗಳ ಹುದ್ದೆ ಎಲ್ಲೆಲ್ಲಿ ಖಾಲಿ ಇದೆ ?

(ಇ) ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡ ಕ್ರಮಗಳೇನು ?

ಶ್ರೀ ಕೆ. ಎಸ್. ನಾಗರತ್ನಮ್ಮ (ಆರೋಗ್ಯ ಸಚಿವರು).—

ಅ) ೪೭೦

ಜಿಲ್ಲಾವಾರು ಮಾಹಿತಿ ಲಗತ್ತಿಸಿದೆ.

ಹೊನ್ನಾವರ ತಾಲ್ಲೂಕಿನ ಬಳಕೂರ ಮತ್ತು ಹೊನ್ನಾವರದಲ್ಲಿ ಒಂದೊಂದು ವೈದ್ಯಾಧಿಕಾರಿ ಹುದ್ದೆ ಖಾಲಿ ಇವೆ.

ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಈಗಾಗಲೇ ಕರ್ನಾಟಕ ಲೋಕ ಸೇವಾ ಆಯೋಗವನ್ನು ಕೋರಲಾಗಿದೆ. ಆಯ್ಕೆ ಪಟ್ಟಿ ಬಂದ ಕೂಡಲೇ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.